2018 ಕ.ತೀ.ವ 1252

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

ಶಂಕರೇಗೌಡ ಅಲಿಯಾಸ್ ಶಂಕರ –ವಿರುದ್ಧ– ಕರ್ನಾಟಕ ರಾಜ್ಯ, ಮಾದನಾಯಕನಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ಮತ್ತು ಮತ್ತೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

2ನೇ ಆರೋಪಿಯಾಗಿರುವ ಅರ್ಜಿದಾರನು, ಭಾರತ ದಂಡ ಸಂಹಿತೆಯ 34ನೇ ಪ್ರಕರಣವನ್ನು ಓದಿಕೊಂಡು, 336–ಎ ಮತ್ತು 372ನೇ ಪ್ರಕರಣಗಳೊಂದಿಗೆ, ಓದಲಾದ ಅನೈತಿಕ ವ್ಯವಹಾರ (ನಿಷೇಧ) ಅಧಿನಿಯಮದ 3, 4, 5, 6, 7, 8 ಮತ್ತು 9ನೇ ಪ್ರಕರಣಗಳ ಅಡಿಯಲ್ಲಿ, ಅಪರಾಧದ ಸಂಬಂಧದಲ್ಲಿ ಆರೋಪ ಪಟ್ಟಿ ಮಾಡಲಾಗಿದೆ. ಈ ವಿಷಯವನ್ನು ಈಗ, ಸೆಷನ್ಸ್ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.

ಇದು, ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರ ವರದಿಯನ್ನಾಧರಿಸಿ ಎಫ್‌ಐಆರ್‌ನ್ನು ನೋಂದಾಯಿಸಿರುವ ಪ್ರಕರಣವಾಗಿದೆ. ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರು ಉಪ ಪೊಲೀಸ್ ಅಧೀಕ್ಷಕರ ಆದೇಶದಂತೆ ಶೋಧನೆ ನಡೆಸಿದ್ದಾರೆ. ದೋಷರೋಪಣೆಯ ವಸ್ತುವನ್ನು ಜಪ್ತಿ ಮಾಡಿ, ಸ್ವತ್ತು ನಮೂನೆಯಲ್ಲಿ ಸೇರಿಸಲಾಗಿದೆ ಮತ್ತು ನ್ಯಾಯಾಲಯಕ್ಕೆ ಒಪ್ಪಿಸಲಾಗಿದ್ದು, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅದಕ್ಕೆ ಸಹಿ ಮಾಡಿದ್ದಾರೆ. ಸಾಕ್ಷಿದಾರರ ಹೇಳಿಕೆಯನ್ನು, ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ದಾಖಲಿಸಿದ್ದು, ಅವರು ಆರೋಪಿಯನ್ನು ಮಾತ್ರ ದಸ್ತಗಿರಿ ಮಾಡಿದ್ದಾರೆ. ಉಪ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರನ್ನು ಆರೋಪಪಟ್ಟಿಯಲ್ಲಿ ಸಾಕ್ಷಿದಾರರನ್ನಾಗಿ ತೋರಿಸಿದಾಗ್ಯೂ, ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಅವರನ್ನು ತನಿಖಾಧಿಕಾರಿಯನ್ನಾಗಿ

*ಕ್ರಿಮಿನಲ್ ಅರ್ಜಿ ಸಂ. 5330/2015, ದಿನಾಂಕ 3ನೇ ಫೆಬ್ರವರಿ, 2016.

ತೋರಿಸಲಾಗಿದೆ. ಈ ಅಧಿನಿಯಮದ 13ನೇ ಪ್ರಕರಣದ ಆದೇಶದ ಪ್ರಕಾರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರು, ವಿಶೇಷ ಪೊಲೀಸ್ ಅಧಿಕಾರಿಯಾಗುವಂತಿಲ್ಲ. ಪೊಲೀಸ್ ಇನ್ಸ್‌ಪೆಕ್ಟರ್‌ರನ್ನು ಅಥವಾ ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಮೇಲಿನ ಅಧಿಕಾರಿಯನ್ನು ಮಾತ್ರವೇ ವಿಶೇಷ ಅಧಿಕಾರಿಯನ್ನಾಗಿ ನೇಮಿಸಲು ಸಾಧ್ಯ. ಪೊಲೀಸ್ ಇನ್ಸ್‌ಪೆಕ್ಟರ್ ಅವರು ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. ಅದು, ಉಪ– ಪೊಲೀಸ್ ಅಧೀಕ್ಷಕರು ಮತ್ತು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರು ಅಧಿಕಾರ ಚಲಾಯಿಸುವುದಕ್ಕೆ ಸಮನಾಗಿ ಕಾಣಿಸಿದರೂ, ಒಂದು ಪ್ರದೇಶಕ್ಕೆ ಒಬ್ಬರಿಗಿಂತ ಹೆಚ್ಚು ವಿಶೇಷಾಧಿಕಾರಿಗಳು ಇರುವಂತಿಲ್ಲ ಎಂಬ ವಾಸ್ತವ ಉಳಿಯುತ್ತದೆ. ಉಪ– ಪೊಲೀಸ್ ಅಧೀಕ್ಷಕರು ಈ ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸಿದ್ದಾರೆ, ಶೋಧನೆಗಾಗಿ ಆದೇಶ ಹೊರಡಿಸಿದ ತರುವಾಯ, ಅವರು, ತನಿಖೆಯ ಮೇಲ್ವಿಚಾರಣೆ ನಡೆಸಿದ್ದಾರೆ ಮತ್ತು ತನಿಖೆಯನ್ನು ಪೂರ್ಣಗೊಳಿಸಿದ ತರುವಾಯ, ಆರೋಪಿತ ವ್ಯಕ್ತಿಗಳನ್ನು ಪ್ರಾಸಿಕ್ಯೂಷನ್ ಮಾಡಲು ಪರ್ಯಾಪ್ತ ಸಂಗತಿಯಿಂದ ಮನದಟ್ಟು ಮಾಡಿರುವರು ಎಂಬುದು ಆರೋಪಪಟ್ಟಿ ಸಂಗತಿಗಳಿಂದ ತಿಳಿದುಬರುವುದಿಲ್ಲ. ಪೊಲೀಸ್ ಇನ್ಸ್‌ಪೆಕ್ಟರ್‌ನು, ವಿಶೇಷಾಧಿಕಾರಿಯಾಗಿರುವನು ಎಂದು ಅರ್ಥೈಸುವುದಾದರೆ, ಈ ಅಧಿನಿಯಮದ 15(1)ನೇ ಪ್ರಕರಣದ ಅಡಿಯಲ್ಲಿ ಆತನ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದನ್ನು ಸೂಚಿಸಿರುವ ಯಾವುದೇ ಸಂಗತಿ ಇಲ್ಲ. ಅದು ಈ ಕೆಳಗಿನಂತಿದೆ:

*15. ‘‘ವಾರಂಟ್ ಇಲ್ಲದೇ ಶೋಧನೆ.– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು, ಯಾವುದೇ ಸ್ಥಳಗಳಲ್ಲಿ ವಾಸಿಸುತ್ತಿರುವ ಒಬ್ಬ ವ್ಯಕ್ತಿಯ ಸಂಬಂಧದಲ್ಲಿ ಮಾಡಲಾಗಿದ್ದರೆ ಅಥವಾ ಮಾಡಲಾಗುತ್ತಿದ್ದ ಎಂದು ಮತ್ತು ವಾರಂಟು ಪಡೆದು ಆ ಸ್ಥಳದ ಶೋಧನೆಯನ್ನು ಅನಗತ್ಯ ವಿಳಂಬವಿಲ್ಲದೇ ಮಾಡಲು ಸಾಧ್ಯವಾಗದೆಂದು ವಿಶೇಷ ಪೊಲೀಸ್ ಅಧಿಕಾರಿಗೆ ಅಥವಾ ಸಂದರ್ಭಾನುಸಾರ ಮಾನವ ಕಳ್ಳಸಾಗಣೆ ಪೊಲೀಸ್ ಅಧಿಕಾರಿಗೆ ನಂಬಲು ಯುಕ್ತ ಆಧಾರಗಳಿದ್ದಾಗ,*

*ಅಂಥ ಅಧಿಕಾರಿಯು, ತನ್ನ ನಂಬಿಕೆಗೆ ಇರುವ ಆಧಾರಗಳನ್ನು ಅಭಿಲೇಖಿಸಿ ವಾರಂಟಿಲ್ಲದೇ ಅಂಥ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧನೆ ಮಾಡಬಹುದು."*

ಸರ್ಕಾರಿ ಅಧಿಸೂಚನೆ ದಿನಾಂಕ: 02.08.2008ರಲ್ಲಿರುವ ದ್ವಂದದಿಂದಾಗಿ, ಇದು ಪ್ರಶ್ನಿಸುವ ಅರ್ಜಿಯಾಗಿರುವುದಿಲ್ಲ, ಆದರೆ ಈ ತನಿಖೆಯನ್ನು, ಅಧಿಕಾರವ್ಯಾಪ್ತಿ ಇಲ್ಲದೆ ಮಾಡಲಾಗಿದೆ ಎಂದು ಗಮನಿಸಿದ ತರುವಾಯವೂ ಕಾನೂನುಬಾಹಿರತೆಯನ್ನು ಮುಂದುವರಿಸಲು ಅವಕಾಶ ನೀಡಲು ಸಾಧ್ಯವಿಲ್ಲ. ಈ ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ಅಧಿಕಾರವ್ಯಾಪ್ತಿ ಇಲ್ಲದೆ ಅಪರಾಧಗಳ ನೋಂದಣಿ ಮತ್ತು ತನಿಖೆಯನ್ನು, ಮಾಡಲಾಗಿದೆ ಮತ್ತು ಇದು ನಿರರ್ಥಕ ಕಾರ್ಯವಾಗಿದ್ದು, ಸಾರ್ವಜನಿಕ ಸಮಯ ಮತ್ತು ಶಕ್ತಿಯ ದುರುಪಯೋಗವಾಗಿದೆ. ಕಾನೂನು ವಿಫಲವಾದಾಗ, ದುರುಳತನವು ವಿಜೃಂಭಿಸುತ್ತದೆ. ಅನಕ್ಷರತೆ ಮತ್ತು ಬಡತನವು, ಅಬಲೆಯರ ಮೇಲೆ ಶೋಷಣೆ ಎಸಗುವ ದುಷ್ಕೃತ್ಯದಲ್ಲಿ ತೊಡಗುವುದಕ್ಕೆ ಮತ್ತು ಸಂಘಟಿತವಾದ ರೀತಿಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಅವರನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ದಾರಿ ಮಾಡಿಕೊಡುತ್ತದೆ. ಈ ಅಧಿನಿಯಮದ ಅಡಿಯಲ್ಲಿ ಹೂಡಿದ ಪ್ರಕರಣವು, ಸರ್ಕಾರಿ ಆದೇಶದಲ್ಲಿರುವ ದ್ವಂದಾರ್ಥದಿಂದ ವಿಫಲವಾಗಿದ್ದರೆ, ಅದು ಪ್ರಜಾಪ್ರಭುತ್ವದ ಅಣಕವಲ್ಲದೆ ಬೇರೇನೂ ಅಲ್ಲ; ರಾಜ್ಯವು ಎಚ್ಚೆತ್ತುಕೊಂಡು, ಒಂದು ನಿರ್ದಿಷ್ಟ ಪ್ರದೇಶಕ್ಕೆ ಒಬ್ಬ ವಿಶೇಷ ಪೊಲೀಸ್ ಅಧಿಕಾರಿಯನ್ನು ನಿರ್ದಿಷ್ಟವಾಗಿ ನೇಮಕ ಮಾಡುವ ಮೂಲಕ ಈ ಅಧಿನಿಯಮದ 13ನೇ ಪ್ರಕರಣದ ಆಜ್ಞಾಪನೆಯನ್ನು ಪರಿಣಾಮಕಾರಿಯನ್ನಾಗಿಸಲು ಈ ಅಧಿನಿಯಮದ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತಮ್ಮ ಪದೀಯ ಪ್ರಕಾರ್ಯದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಅವರು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಲು, ಹಾಗೆ ನೇಮಕ ಮಾಡಲಾದ ವಿಶೇಷ ಅಧಿಕಾರಿಗಳನ್ನು ಸಂವೇದನಾಶೀಲರನ್ನಾಗಿಸಲು ಇದು ಸೂಕ್ತ ಸಮಯವಾಗಿದೆ.

ಈ ಅಧಿನಿಯಮದ 13ನೇ ಪ್ರಕರಣದ ಮೂಲಕ ನೇಮಕ ಮಾಡಲಾದ ವಿಶೇಷ ಅಧಿಕಾರಿಯು, ತನಿಖೆಯನ್ನು ಸುಸೂತ್ರವಾಗಿ ನಡೆಸಿರುವುದಿಲ್ಲವಾದ್ದರಿಂದ, ಅಧಿವಿಚಾರಣೆಯನ್ನು ಈಗಾಗಲೇ ಪ್ರಾರಂಭಿಸಲಾಗಿದ್ದರೂ, ಇನ್ನೂ ಹೆಚ್ಚಿನ ಕಾಲ

ವ್ಯವಹರಣೆಗಳನ್ನು ಮುಂದುವರೆಸಲು ಅನುಮತಿಸುವುದು ಪ್ರಕ್ರಿಯೆಯ ದುರುಪಯೋಗವಾಗುತ್ತದೆ ಎಂಬ ಮೂಲ ಅನಿಶ್ಚಿತತೆಯನ್ನು ಗಮನಕ್ಕೆ ತೆಗೆದುಕೊಂಡರೆ, ಅದು ಕಾನೂನುಬಾಹಿರವಾದುದಾಗಿದೆ ಮತ್ತು ಕಾನೂನು ವ್ಯವಹರಣೆಯನ್ನು ನಿರರ್ಥಕಗೊಳಿಸುತ್ತದೆ.

ಇದನ್ನು ಪರಿಗಣಿಸಿದ ನಂತರ ಈ ಅರ್ಜಿಯು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಧಿಕಾರವ್ಯಾಪ್ತಿ ಅಡಿಯಲ್ಲಿ ರದ್ದುಗೊಳ್ಳಲು ಅರ್ಹವಾಗಿದೆ.

ಈ ಅರ್ಜಿಯನ್ನು ಅಂಗೀಕರಿಸಲಾಗಿದೆ. VIIIನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ಎಸ್.ಸಿ.ನಂ.219/2013 ರಲ್ಲಿರುವ ಕ್ರಿಮಿನಲ್ ವ್ಯವಹರಣೆಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ಎಐಆರ್ 1962 ಎಸ್‌ಸಿ 63* | |
| *ದೆಹಲಿ ಆಡಳಿತ –ವಿರುದ್ಧ– ರಾಮ್ ಸಿಂಗ್* | *(ಉಲ್ಲೇ) 7* |
| *2. ಐಎಲ್‌ಆರ್ 2013 ಕೆಎಆರ್ 983* | |
| *ಗಿರೀಶ್ ಚಂದ್ರ –ವಿರುದ್ಧ–* | |
| *(ಕರ್ನಾಟಕ) ರಾಜ್ಯ ಲೋಕಾಯುಕ್ತ ಪೊಲೀಸ್* | *(ಉಲ್ಲೇ) 11* |

ಅರ್ಜಿದಾರರ ಪರ : ಶ್ರೀ ಎಸ್. ಚೇತನ್ ನಾಗ್, ವಕೀಲರು;
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಚೇತನ್ ದೇಸಾಯಿ, ಹೆಚ್‌ಸಿಜಿಪಿ;
2ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಜ್ವಾಲಾ ಪೌಲ್ಸೆ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ರತ್ನಕಲಾ:**

2ನೇ ಆರೋಪಿಯಾಗಿರುವ ಅರ್ಜಿದಾರನು, ಭಾರತ ದಂಡ ಸಂಹಿತೆಯ 34ನೇ ಪ್ರಕರಣವನ್ನು ಓದಿಕೊಂಡು, 336–ಎ ಮತ್ತು 372ನೇ ಪ್ರಕರಣಗಳೊಂದಿಗೆ, ಓದಲಾದ ಅನೈತಿಕ ವ್ಯವಹಾರ (ನಿಷೇಧ) ಅಧಿನಿಯಮದ 3, 4, 5, 6, 7, 8 ಮತ್ತು 9ನೇ ಪ್ರಕರಣಗಳ ಅಡಿಯಲ್ಲಿ ಅಪರಾಧದ ಸಂಬಂಧದಲ್ಲಿ ಆರೋಪ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ವಿಷಯವನ್ನು ಈಗ, ಸೆಷನ್ಸ್ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.

2. ವೇಶ್ಯಾವೃತ್ತಿ ನಡೆಯುತ್ತಿರುವ ಬಗ್ಗೆ ನಂಬಲರ್ಹವಾದ ಮಾಹಿತಿಯ ಆಧಾರದ ಮೇಲೆ, ಈ ಮೊಕದ್ದಮೆಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್‌ನ ಸಾರಾಂಶವೇನೆಂದರೆ, ಸರ್ಕಲ್ ಇನ್ಸ್‌ಪೆಕ್ಟರ್, ತನ್ನ ಸಿಬ್ಬಂದಿ ಮತ್ತು ಪಂಚರೊಂದಿಗೆ, ದಿನಾಂಕ: 27.08.2010ರ ರಾತ್ರಿಯಂದು ಅರುಣೋದಯ ರೆಸಿಡೆನ್ಸಿ ವಸತಿ ಗೃಹದ ಮೇಲೆ ದಾಳಿಮಾಡಿದ್ದಾರೆ ಮತ್ತು 1ನೇ ಆರೋಪಿಯು, ಅಪ್ರಾಪ್ತ ಬಾಲಕಿಯರಾಗಿರುವ ಅಪರಾಧಿಕ ಸಾಕ್ಷ್ಯ–2 ಮತ್ತು 3 ಇವರನ್ನು ಒದಗಿಸಿದ್ದಾನೆ ಹಾಗೂ ಅಪರಾಧಿಕ ಸಾಕ್ಷ್ಯ–4 ಇವಳಿಗೆ ಹಣದ ಆಮಿಷ ತೋರಿಸಿದ್ದಾನೆ ಮತ್ತು ವಸತಿಗೃಹಕ್ಕೆ 2ನೇ ಆರೋಪಿಯ ಮೂಲಕ ವೇಶ್ಯಾವೃತ್ತಿಗಾಗಿ ಅವರನ್ನು ಕಳುಹಿಸಿದ್ದು, ಹಾಗಾಗಿ, 3, 4 ಮತ್ತು 5ನೇ ಆರೋಪಿಯ ನೆರವಿನೊಂದಿಗೆ ವೇಶ್ಯಾವೃತ್ತಿಯನ್ನು ನಡೆಸಿದ್ದಾನೆ.

3. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಚೇತನ್‌ನಾಗ್ ಅವರು ಈ ಮುಂದಿನಂತೆ ವಾದ ಮಂಡಿಸಿದ್ದಾರೆ. ಅಪರಾಧಿಕ ಸಾಕ್ಷ್ಯ–1/ ಸಿ.ಪಿ.ಐ. ನೆಲಮಂಗಲ ಇವರು, ಈ ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ವಿಶೇಷ ಪೊಲೀಸ್ ಅಧಿಕಾರಿಯನ್ನು ಗೊತ್ತುಪಡಿಸಿರುವುದಿಲ್ಲ. ಉಪ ಪೊಲೀಸ್

ಅಧೀಕ್ಷಕರು, ನೆಲಮಂಗಲ ಇವರು, ಆತನ ಮೇಲೆ ಹೊರಡಿಸಿದ ಶೋಧನಾ ಆದೇಶ ದಿನಾಂಕ: 27.08.2010ರ ಆಧಾರದ ಮೇಲೆ, ಅಪರಾಧಿಕ ಸಾಕ್ಷ್ಯ–8/ ಅಪಾಯಕ್ಕೆ ಸಿಲುಕಿದ ಸಾಕ್ಷಿದಾರರು, ಅಪರಾಧಿಕ ಸಾಕ್ಷ್ಯ–7/ಸಾರ್ವಜನಿಕ ವ್ಯಕ್ತಿ ಇವರನ್ನು ತನಿಖೆಗಾಗಿ ಕಳುಹಿಸಿದ್ದಾರೆ. ಅದರ ತರುವಾಯ ಅವರು, ಸದರಿ ವಸತಿ ಗೃಹದ ಮೇಲೆ ದಾಳಿ ನಡೆಸಿ ಮತ್ತು ಅದರಲ್ಲಿದ್ದು ಅರ್ಜಿದಾರನು ಸೇರಿದಂತೆ, ಎಂಟು ಆರೋಪಿತ ವ್ಯಕ್ತಿಗಳನ್ನು ದಸ್ತಗಿರಿ ಮಾಡಿದ್ದಾರೆ. ಈ ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ವಿಶೇಷ ಅಧಿಕಾರಿಯನ್ನು ನೇಮಿಸದೆ ಇದ್ದರೂ ಅಪರಾಧಿಕ ಸಾಕ್ಷ್ಯ–15/ಪಿ.ಎಸ್.ಐ (ಕಾನೂನು ಮತ್ತು ಸುವ್ಯವಸ್ಥೆ), ಮಾದನಾಯಕನಹಳ್ಳಿ, ಇವರು ಆರೋಪಿತ ಅಪರಾಧಗಳ ಸಂಬಂಧದಲ್ಲಿ ಪ್ರಕರಣವನ್ನು ನೋಂದಾಯಿಸಿಕೊಂಡಿದ್ದಾರೆ ಮತ್ತು ಎಲ್ಲಾ ಎಂಟು ವ್ಯಕ್ತಿಗಳನ್ನು ದಸ್ತಗಿರಿ ಮಾಡಿದ್ದಾರೆ. 1 ರಿಂದ 3ನೇ ಸಂಖ್ಯೆಯ ಆರೋಪಿಗಳನ್ನು ಆ ಘಟನೆಯ ಬಲಿಪಶುಗಳನ್ನಾಗಿ ಪರಿಗಣಿಸುವಂತೆ ಅಧಿಕಾರ ವ್ಯಾಪ್ತಿ ಹೊಂದಿದ ನ್ಯಾಯಾಲಯಕ್ಕೆ ಅವರು ಮನವಿ ಮಾಡಿದ್ದಾರೆ ಮತ್ತು ಆ ತರುವಾಯ, ಆರೋಪಿತ ನಾಲ್ಕು ವ್ಯಕ್ತಿಗಳ ವಿರುದ್ಧ ಆರೋಪಪಟ್ಟಿಯನ್ನು ದಾಖಲುಮಾಡಿದ್ದಾರೆ. ಮೊದಲನೇ ಆರೋಪಿಯನ್ನು ತಲೆಮರೆಸಿಕೊಂಡಿರುವಂತೆ ತೋರಿಸಲಾಗಿದೆ. ಪ್ರಕ್ರಿಯಾ ಕ್ರಮದೋಷಗಳ ಕಡೆಗೆ ಗಮನ ಹರಿಸದೆ, ಮಾನ್ಯ ಮ್ಯಾಜಿಸ್ಟ್ರೇಟರು, ಆ ವಿಷಯದ ಸಂಜ್ಞೇಯತೆಯನ್ನು ಪಡೆದುಕೊಂಡು, ಆ ಮೂಲಕ ತತ್ಪರಿಣಾಮವಾದ ಆರೋಪಪಟ್ಟಿಯನ್ನು ನಿರರ್ಥಕಗೊಳಿಸಿದ್ದಾರೆ. ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ಉಪ ಪೊಲೀಸ್ ಅಧೀಕ್ಷಕ, ನೆಲಮಂಗಲ ಇವರನ್ನು, ವಿಶೇಷ ಪೊಲೀಸ್ ಅಧಿಕಾರಿಯಾಗಿರುವರೆಂದು ಊಹಿಸಿ, ''ಶೋಧನಾ ಆದೇಶ''ವೆಂದು ಶೀರ್ಷಿಕೆ ನೀಡಿದ್ದರೂ, ಸಿ.ಪಿ.ಐ. ನೆಲಮಂಗಲ ಇವರಿಗೆ ಅವರು ದಿನಾಂಕ: 27.8.2010ರಂದು ಆದೇಶವನ್ನು ಹೊರಡಿಸಿದ್ದು, ವಾಸ್ತವವಾಗಿ ಅದು ದಾಳಿ ನಡೆಸಲು ನೀಡಿದ ಆದೇಶವಾಗಿದೆ. ವಾರೆಂಟ್ ಇಲ್ಲದೇ ಆ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅದು ಪಿ.ಎಸ್.ಐ. ಅನ್ನು ಸಮರ್ಥಗೊಳಿಸಿದ ಆದೇಶವಾಗಿರಲಿಲ್ಲ. ಉಪ–ಪೊಲೀಸ್ ಅಧೀಕ್ಷಕರು ಹೊರಡಿಸಿದ ಆದೇಶವು

ಕಾನೂನುಬಾಹಿರವಾಗಿದೆ ಮತ್ತು ಈ ಅಧಿನಿಯಮದ 15(1)ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿದೆ. ಶೋಧನೆಯನ್ನು, ಆ ಸ್ಥಳದ ಇಬ್ಬರು ಅಥವಾ ಹೆಚ್ಚಿನ ಗೌರವಾನ್ವಿತ ನಿವಾಸಿಗಳ ಮುಂದೆ ನಡೆಸಿರುವುದಿಲ್ಲ. ವೈದ್ಯಕೀಯ ಪ್ರಮಾಣ ಪತ್ರದ ಪ್ರಕಾರ, ಬಲಿಪಶುವಾದ 1 ರಿಂದ 3ನೇ ಆರೋಪಿಗಳು, 18 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ. ಹಾಗಾಗಿ, ಇದು ಭಾರತ ದಂಡ ಸಂಹಿತೆಯ 366ಎ ಮತ್ತು 372ನೇ ಪ್ರಕರಣಗಳ ಅಡಿಯಲ್ಲಿನ ಪ್ರಕರಣವಾಗುವುದಿಲ್ಲ.

4. ವಾದ ನಡೆಯುತ್ತಿದ್ದ ಅವಧಿಯಲ್ಲಿ, ಎರಡನೇ ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ರಾಜ್ಯದಲ್ಲಿ ಈ ಅಧಿನಿಯಮದ ಅಡಿಯಲ್ಲಿ ವಿಶೇಷ ಅಧಿಕಾರಿಗಳನ್ನು ಅಧಿಸೂಚಿಸಿದ ಅಧಿಸೂಚನೆಯನ್ನು ದಾಖಲೆಯಲ್ಲಿ ಮಂಡಿಸಿದ್ದು, ಅದು ಈ ಕೆಳಗಿನಂತಿದೆ:

> *"ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ ಕೇಂದ್ರ ಅಧಿನಿಯಮ x)ರ 21ನೇ ಪ್ರಕರಣದೊಂದಿಗೆ ಓದಲಾದ, ಅನೈತಿಕ ವ್ಯವಹಾರ ಪ್ರತಿಬಂಧ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮದ 104) 13ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಈ ಬಗ್ಗೆ ಈ ಹಿಂದೆ ಹೊರಡಿಸಲಾದ ಎಲ್ಲಾ ಅಧಿಸೂಚನೆಗಳನ್ನು ರದ್ದುಗೊಳಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮದ ಉದ್ದೇಶಕ್ಕಾಗಿ ಅಂಕಣ (3)ರಲ್ಲಿ ನಮೂದಿಸಲಾದ ಅಧಿಕಾರ ವ್ಯಾಪ್ತಿಯೊಳಗೆ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳ ಸಂಬಂಧದಲ್ಲಿ ವಿಶೇಷ ಪೊಲೀಸ್ ಅಧಿಕಾರಿಯನ್ನಾಗಿ ಕೆಳಗಿನ ಅನುಸೂಚಿಯ ಅಂಕಣ (2)ರಲ್ಲಿ ನಮೂದಿಸಲಾದ ಅಧಿಕಾರಿಗಳನ್ನು ನೇಮಕ ಮಾಡಿದೆ:*

| ಕ್ರ.ಸಂ. | ಅಧಿಕಾರಿಗಳು | ಪ್ರದೇಶ |
|---|---|---|
| (1) | (2) | (3) |
| 1. | ಜಿಲ್ಲೆಗಳ ಪ್ರಭಾರ ಹೊಂದಿರುವ ಪೊಲೀಸ್ ಅಧೀಕ್ಷಕರು | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 2. | ಹೆಚ್ಚುವರಿ ಪೊಲೀಸ್ ಅಧೀಕ್ಷಕರು | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 3. | ಉಪ–ವಿಭಾಗೀಯ ಪೊಲೀಸ್ ಅಧಿಕಾರಿಗಳು | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 4. | ಸರ್ಕಲ್‌ಗಳ ಪ್ರಭಾರ ಹೊಂದಿರುವ ಪೊಲೀಸ್ ಇನ್ಸ್‌ಪೆಕ್ಟರ್ | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 5. | ಬೆಂಗಳೂರು ನಗರದಲ್ಲಿರುವ ಪೊಲೀಸ್ ಉಪಾಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ ಪೂರ್ವ, ಪಶ್ಚಿಮ ಮತ್ತು ಡಿಸಿಪಿ ಅಪರಾಧ | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 6. | ಬೆಂಗಳೂರು ನಗರದಲ್ಲಿರುವ ವಿಭಾಗಗಳ ಸಹಾಯಕ ಪೊಲೀಸ್ ಆಯುಕ್ತರು | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 7. | ಸಹಾಯಕ ಪೊಲೀಸ್ ಆಯುಕ್ತರು, ವಿಶೇಷ ದಳ, ಬೆಂಗಳೂರು | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 8. | ಬೆಂಗಳೂರು ನಗರದಲ್ಲಿರುವ ಉಪ–ವಿಭಾಗಗಳ ಪ್ರಭಾರ ಹೊಂದಿರುವ ಪೊಲೀಸ್ ಇನ್ಸ್‌ಪೆಕ್ಟರ್‌ಗಳು | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |

| ಕ್ರ.ಸಂ. (1) | ಅಧಿಕಾರಿಗಳು (2) | ಪ್ರದೇಶ (3) |
|---|---|---|
| 9. | ಪೊಲೀಸ್ ಇನ್ಸ್‌ಪೆಕ್ಟರ್‌ಗಳು ವಿಶೇಷ ದಳ, ಬೆಂಗಳೂರು ನಗರ | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |
| 10. | ಉಪ ಪೊಲೀಸ್ ಅಧೀಕ್ಷಕರು, ಸಿ.ಐ.. ಸ್ಕ್ವಾಡ್, ಸಿ.ಓ.ಡಿ. | ಅವರಿಗೆ ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯೊಳಗೆ |

ಸದರಿ ಅಧಿಸೂಚನೆಯನ್ನು ಟೀಕಿಸಿ, ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಸಂಬಂಧಪಟ್ಟ ಪ್ರದೇಶಕ್ಕೆ ಒಬ್ಬರಿಗಿಂತ ಹೆಚ್ಚು ವಿಶೇಷ ಪೊಲೀಸ್ ಅಧಿಕಾರಿಯನ್ನು ನೇಮಿಸಲಾಗದು ಎಂದು ವಾದ ಮಂಡಿಸಿದ್ದಾರೆ. ಸಂಬಂಧಪಟ್ಟ ಪ್ರದೇಶಕ್ಕೆ ಒಬ್ಬರಿಗಿಂತ ಹೆಚ್ಚು ಅಧಿಕಾರಿಗಳನ್ನು ನೇಮಿಸಿರುವುದರಿಂದ, ಮೇಲಿನ ಅಧಿಸೂಚನೆಯು, ಅಧಿಕಾರವನ್ನು ಪರಸ್ಪರ ವ್ಯಾಪ್ತಗೊಳಿಸುತ್ತದೆ. ಇಡೀ ಅಧಿಸೂಚನೆಯು, ಈ ಅಧಿನಿಯಮದ 13ನೇ ಪ್ರಕರಣದ ಅಜ್ಞಾಪನೆಗೆ ವಿರುದ್ಧವಾದುದಾಗಿದೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳನ್ನು ಕುರಿತು ತನಿಖೆ ಮಾಡಲು ವಿಶೇಷ ಪೊಲೀಸ್ ಅಧಿಕಾರಿಯನ್ನಾಗಿ ನೇಮಕ ಮಾಡದಿರುವ ಅಧಿಕಾರಿಯು, ಪ್ರಕರಣವನ್ನು ತನಿಖೆ ಮಾಡುತ್ತಿರುವರೆಂದು ಅತ್ಯಗತ್ಯವಾಗಿ ಅಭಿಪ್ರಾಯಪಡಬೇಕಾಗುತ್ತದೆ.

5. ಉಚ್ಚ ನ್ಯಾಯಾಲಯದ ಮಾನ್ಯ ಸರ್ಕಾರಿ ನ್ಯಾಯವಾದಿಯು, ಅವರ ಉತ್ತರಗಳನ್ನು ನೀಡುವಾಗ, ಪ್ರಾ.ಸಾ.–1/ ಘಟನೆಯ ಬಲಿಪಶುವಿನ ಹೇಳಿಕೆಯನ್ನು ಹಾಜರುಪಡಿಸಿದ್ದಾರೆ. ಘಟನೆಯ ದಿನಾಂಕದಂದು ತಾನು, ಅಪ್ರಾಪ್ತಳಾಗಿದ್ದುದಾಗಿ ಮತ್ತು ಭಾರತ ದಂಡ ಸಂಹಿತೆಯ 366–ಎ ಮತ್ತು 372ನೇ ಪ್ರಕರಣಗಳ ಅಡಿಯಲ್ಲಿ ಸರಿಯಾಗಿಯೇ ಆರೋಪಗಳನ್ನು ರೂಪಿಸಲಾಗಿದೆ, ಅರ್ಜಿದಾರನು, ಈ ಅಧಿಸೂಚನೆಯನ್ನು ಪ್ರಶ್ನಿಸಿದ್ದಲ್ಲಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣವು, ಆತನಿಗೆ ಸೂಕ್ತ ಪ್ರಕರಣವಾಗಿರುವುದಿಲ್ಲ. ಸಾಕ್ಷ್ಯವನ್ನು ಈಗಾಗಲೇ

ಪ್ರಾರಂಭಿಸಲಾಗಿದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಸಂದರ್ಭ ಉಂಟಾಗದು.

6. ಕಾನೂನು ವಾದಗಳ ವಿಷಯಕ್ಕೆ ಬಂದರೆ – ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ನೇಮಿಸಲಾದ ವಿಶೇಷ ಅಧಿಕಾರಿಯು ತನಿಖೆಯನ್ನು ನಡೆಸಿರುವುದಿಲ್ಲ. ಈ ಅಧಿನಿಯಮದ 13(1) ಮತ್ತು (2)ನೇ ಪ್ರಕರಣಗಳು ಶಾಸನದ ಸುಸಂಬದ್ಧ ಭಾಗವಾಗಿದ್ದು, ಅದು ಈ ಕೆಳಗಿನಂತಿದೆ:

> *"**13. ವಿಶೇಷ ಪೊಲೀಸ್ ಅಧಿಕಾರಿ ಮತ್ತು ಸಲಹಾ ಮಂಡಳಿ.**– (1) ಈ ಬಗ್ಗೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬೇಕಾದ ಪ್ರತಿಯೊಂದು ಪ್ರದೇಶಕ್ಕೆ ಅಥವಾ ಸರ್ಕಾರವು ಈ ಬಗ್ಗೆ ಆ ಪ್ರದೇಶದಲ್ಲಿ ನಡೆಯುವ ಅಧಿನಿಯಮದ ಅಡಿಯಲ್ಲಿ ಅಪರಾಧಗಳನ್ನು ಕುರಿತು ವ್ಯವಹರಿಸಲು ಆ ಸರ್ಕಾರವು ಅಥವಾ ಅದರ ಪರವಾಗಿ ಒಬ್ಬ ವಿಶೇಷ ಪೊಲೀಸ್ ಅಧಿಕಾರಿಯನ್ನು ನೇಮಿಸತಕ್ಕದ್ದು.*
>
> *(2) ವಿಶೇಷ ಪೊಲೀಸ್ ಅಧಿಕಾರಿಯು, ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಿರತಕ್ಕದ್ದಲ್ಲ.*
>
> *(2ಎ) ........"*

7. ***ದೆಹಲಿ ಆಡಳಿತ –ವಿರುದ್ಧ– ರಾಮ್ ಸಿಂಗ್***[1] ಪ್ರಕರಣದ ತೀರ್ಪನ್ನು ಅವಲಂಬಿಸಿದ್ದಾರೆ. ಇದು, ಮಹಿಳೆ ಮತ್ತು ಬಾಲಕಿಯರ ಅನೈತಿಕ ಕಳ್ಳ ಸಾಗಾಣಿಕೆ ಅಧಿನಿಯಮ, 1956ರಲ್ಲಿ ಅನೈತಿಕ ವ್ಯವಹಾರವನ್ನು ಹತ್ತಿಕ್ಕಲು 8ನೇ ಪ್ರಕರಣದ ಅಡಿಯಲ್ಲಿನ ಪ್ರಾಸಿಕ್ಯೂಷನ್ ಪ್ರಕರಣವಾಗಿದೆ ಮತ್ತು ಆ ವಿಷಯದ ಬಗ್ಗೆ ತನಿಖೆ ಮಾಡುತ್ತಿರುವ ಸಬ್–ಇನ್ಸ್‌ಪೆಕ್ಟರ್‌ರವರು, ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ.

1. ಎಐಆರ್ 1962 ಎಸ್‌ಸಿ 63

ಈ ಅಧಿನಿಯಮದ ಅಡಿಯಲ್ಲಿ, ಆ ವಿಷಯದ ಬಗ್ಗೆ ತನಿಖೆ ಮಾಡಲು ವಿಶೇಷ ಪೊಲೀಸ್ ಅಧಿಕಾರಿ ಮಾತ್ರ ಸಕ್ಷಮನಾಗಿರುತ್ತನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ಆರೋಪ ಪಟ್ಟಿಯನ್ನು ರದ್ದುಪಡಿಸಿದ್ದಾರೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 551ನೇ ಪ್ರಕರಣದ ಅಡಿಯಲ್ಲಿ (1898ರ ಅಧಿನಿಯಮ–Vರ ಅಡಿಯಲ್ಲಿ) (1974ರ ಅಧಿನಿಯಮ 2ರ 36ನೇ ಪ್ರಕರಣದ ಸಮ ವಿಷಯದಲ್ಲಿ) ಅಂಥ ಅಪರಾಧಗಳನ್ನು ಕುರಿತು ವ್ಯವಹರಿಸುವುದಕ್ಕಾಗಿ ವಿಶೇಷ ಪೊಲೀಸ್ ಅಧಿಕಾರಿಯು ಅಧಿಕಾರ ಪಡೆದಿರುತ್ತಾನೆಂದು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದ್ದು, ಅದು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

> *"25. ಆದುದರಿಂದ, ವಿಶೇಷ ಪೊಲೀಸ್ ಅಧಿಕಾರಿಯು, ತನಿಖೆ ಮಾಡಲು ಸಕ್ಷಮನಾಗಿರುತ್ತಾನೆ ಮತ್ತು ಆತನು ಹಾಗೂ ಆತನ ಸಹಾಯಕ ಪೊಲೀಸ್ ಅಧಿಕಾರಿಗಳು ಮಾತ್ರ ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳ ತನಿಖೆ ಮಾಡಲು ಸಕ್ಷಮರಾದಂಥ ವ್ಯಕ್ತಿಗಳಾಗಿದ್ದಾರೆ ಹಾಗೂ ವಿಶೇಷ ಪೊಲೀಸ್ ಅಧಿಕಾರಿಗಳಂತೆ ನಿರ್ದಿಷ್ಟವಾಗಿ ನೇಮಕ ಮಾಡದಿರುವ ಪೊಲೀಸ್ ಅಧಿಕಾರಿಗಳು ಅಪರಾಧಗಳು ಸಂಜ್ಞೇಯವಾಗಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳನ್ನು ತನಿಖೆ ಮಾಡುವಂತಿಲ್ಲ ಎಂದು ನಾವು ಅಭಿಪ್ರಾಯಪಡುತ್ತೇವೆ. ಈ ಕಾರಣದಿಂದ, ವಿಫಲವಾದ ದೆಹಲಿ ಆಡಳಿತವು ಸಲ್ಲಿಸಿದ ಈ ಅಪೀಲನ್ನು ಈ ಮೂಲಕ ವಜಾಗೊಳಿಸಲಾಗಿದೆ."*

ತಮ್ಮ ವಿವೇಚನಾಯುತ ಅಭಿಪ್ರಾಯವನ್ನು ದಾಖಲಿಸುವಾಗ, ಮಾನ್ಯ ನ್ಯಾಯಮೂರ್ತಿ ಜೆ.ಆರ್. ಮುಧೋಳ್ಕರ್ ಅವರು, ವಿಶೇಷ ಪೊಲೀಸ್ ಅಧಿಕಾರಿ ಮತ್ತು ಪೊಲೀಸ್ ಅಧಿಕಾರಿಗಳು ತನಿಖೆ ಮಾಡಲು ಒಟ್ಟಿಗೆ ಅಧಿಕಾರವನ್ನು ಚಲಾಯಿಸುವಲ್ಲಿ ಇರುವ ಯಾವುದೇ ಅಪಾಯದ ಕಡೆ ಗಮನಹರಿಸಿಲ್ಲವಾದಾಗ್ಯೂ. ಬಹುಮತದ ಅಭಿಪ್ರಾಯದ ಮೇಲೆ ಈ ಅಪೀಲನ್ನು ವಜಾಗೊಳಿಸಲಾಗಿದೆ.

8. ಇದು, ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರ ವರದಿಯನ್ನಾಧರಿಸಿ ಎಫ್‌ಐಆರ್‌ನ್ನು ನೋಂದಾಯಿಸಿರುವ ಪ್ರಕರಣವಾಗಿದೆ. ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರು, ಉಪ ಪೊಲೀಸ್ ಅಧೀಕ್ಷಕರ ಆದೇಶದಂತೆ ಶೋಧನೆ ನಡೆಸಿದ್ದಾರೆ. ದೋಷಾರೋಪಣೆಯ ವಸ್ತುವನ್ನು ಜಪ್ತಿ ಮಾಡಿ ಸ್ವತ್ತು ನಮೂನೆಯಲ್ಲಿ ಸೇರಿಸಲಾಗಿದೆ ಮತ್ತು ನ್ಯಾಯಾಲಯಕ್ಕೆ ಒಪ್ಪಿಸಲಾಗಿದ್ದು, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅದಕ್ಕೆ ಸಹಿ ಮಾಡಿದ್ದಾರೆ. ಸಾಕ್ಷಿದಾರರ ಹೇಳಿಕೆಯನ್ನು, ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ದಾಖಲಿಸಿದ್ದು, ಅವರು ಆರೋಪಿಯನ್ನು ಮಾತ್ರ ದಸ್ತಗಿರಿ ಮಾಡಿದ್ದಾರೆ. ಉಪ ಪೊಲೀಸ್ ಅಧೀಕ್ಷಕರು ಮತ್ತು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರನ್ನು ಆರೋಪಪಟ್ಟಿಯಲ್ಲಿ ಸಾಕ್ಷಿದಾರರನ್ನಾಗಿ ತೋರಿಸಿದ್ದುಗ್ಯೂ, ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಅವರನ್ನು ತನಿಖಾಧಿಕಾರಿಯನ್ನಾಗಿ ತೋರಿಸಲಾಗಿದೆ. ಈ ಅಧಿನಿಯಮದ 13ನೇ ಪ್ರಕರಣದ ಆದೇಶದ ಪ್ರಕಾರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರು, ವಿಶೇಷ ಪೊಲೀಸ್ ಅಧಿಕಾರಿಯಾಗುವಂತಿಲ್ಲ. ಪೊಲೀಸ್ ಇನ್ಸ್‌ಪೆಕ್ಟರ್‌ರನ್ನು ಅಥವಾ ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಮೇಲಿನ ಅಧಿಕಾರಿಯನ್ನು ಮಾತ್ರವೇ ವಿಶೇಷ ಅಧಿಕಾರಿಯನ್ನಾಗಿ ನೇಮಿಸಲು ಸಾಧ್ಯ. ಪೊಲೀಸ್ ಇನ್ಸ್‌ಪೆಕ್ಟರ್ ಅವರು ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. ಅದು, ಉಪ–ಪೊಲೀಸ್ ಅಧೀಕ್ಷಕರು ಮತ್ತು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರು ಅಧಿಕಾರ ಚಲಾಯಿಸುವುದಕ್ಕೆ ಸಮನಾಗಿ ಕಾಣಿಸಿದರೂ, ಒಂದು ಪ್ರದೇಶಕ್ಕೆ ಒಬ್ಬರಿಗಿಂತ ಹೆಚ್ಚು ವಿಶೇಷಾಧಿಕಾರಿಗಳು ಇರುವಂತಿಲ್ಲ ಎಂಬ ವಾಸ್ತವ ಉಳಿಯುತ್ತದೆ. ಉಪ–ಪೊಲೀಸ್ ಅಧೀಕ್ಷಕರು ಈ ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರ ಚಲಾಯಿಸಿದ್ದಾರೆ, ಶೋಧನೆಗಾಗಿ ಆದೇಶ ಹೊರಡಿಸಿದ ತರುವಾಯ, ಅವರು, ತನಿಖೆಯ ಮೇಲ್ವಿಚಾರಣೆ ನಡೆಸಿದ್ದಾರೆ ಮತ್ತು ತನಿಖೆಯನ್ನು ಪೂರ್ಣಗೊಳಿಸಿದ ತರುವಾಯ, ಆರೋಪಿತ ವ್ಯಕ್ತಿಗಳನ್ನು ಪ್ರಾಸಿಕ್ಯೂಷನ್ ಮಾಡಲು ಪರ್ಯಾಪ್ತ ಸಂಗತಿಯಿಂದ ಮನದಟ್ಟು ಮಾಡಿರುವರು ಎಂಬುದು ಆರೋಪಪಟ್ಟಿ ಸಂಗತಿಗಳಿಂದ ತಿಳಿದುಬರುವುದಿಲ್ಲ. ಪೊಲೀಸ್ ಇನ್ಸ್‌ಪೆಕ್ಟರ್‌ನು, ವಿಶೇಷಾಧಿಕಾರಿಯಾಗಿರುವನು ಎಂದು ಅರ್ಥೈಸುವುದಾದರೆ, ಈ ಅಧಿನಿಯಮದ 15(1)ನೇ ಪ್ರಕರಣದ ಅಡಿಯಲ್ಲಿ ಆತನ ಅಧಿಕಾರವ್ಯಾಪ್ತಿಯನ್ನು

ಚಲಾಯಿಸುವುದನ್ನು ಸೂಚಿಸಿರುವ ಯಾವುದೇ ಸಂಗತಿ ಇಲ್ಲ. ಅದು ಈ ಕೆಳಗಿನಂತಿದೆ:

> *15. "**ವಾರಂಟ್ ಇಲ್ಲದೇ ಶೋಧನೆ.**– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು, ಯಾವುದೇ ಸ್ಥಳಗಳಲ್ಲಿ ವಾಸಿಸುತ್ತಿರುವ ಒಬ್ಬ ವ್ಯಕ್ತಿಯ ಸಂಬಂಧದಲ್ಲಿ ಮಾಡಲಾಗಿದ್ದರೆ ಅಥವಾ ಮಾಡಲಾಗುತ್ತಿದೆ ಎಂದು ಮತ್ತು ವಾರಂಟು ಪಡೆದು ಆ ಸ್ಥಳದ ಶೋಧನೆಯನ್ನು ಅನಗತ್ಯ ವಿಳಂಬವಿಲ್ಲದೇ ಮಾಡಲು ಸಾಧ್ಯವಾಗದೆಂದು ವಿಶೇಷ ಪೊಲೀಸ್ ಅಧಿಕಾರಿಗೆ ಅಥವಾ ಸಂದರ್ಭಾನುಸಾರ ಮಾನವ ಕಳ್ಳಸಾಗಣೆ ಪೊಲೀಸ್ ಅಧಿಕಾರಿಗೆ ನಂಬಲು ಯುಕ್ತ ಆಧಾರಗಳಿದ್ದಾಗ, ಅಂಥ ಅಧಿಕಾರಿಯು, ತನ್ನ ನಂಬಿಕೆಗೆ ಇರುವ ಆಧಾರಗಳನ್ನು ಅಭಿಲೇಖಿಸಿ ವಾರಂಟಿಲ್ಲದೇ ಅಂಥ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧನೆ ಮಾಡಬಹುದು."*

9. ಪೊಲೀಸ್ ಠಾಣೆಯ ಎಸ್.ಹೆಚ್.ಓಗೆ ಪೊಲೀಸ್ ಇನ್ಸ್‌ಪೆಕ್ಟರ್‌ನ ವರದಿಯಲ್ಲಿರುವ ಒಕ್ಕಣೆಗಳ ಪ್ರಕಾರ, ಉಪ– ಪೊಲೀಸ್ ಅಧೀಕ್ಷಕರು ಇವರು, ಅರುಣೋದಯ ರೆಸಿಡೆನ್ಸಿ ವಸತಿಗೃಹದಲ್ಲಿ ವೇಶಾವೃತ್ತಿ ಚಟುವಟಿಕೆ ನಡೆಸುತ್ತಿರುವ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಉಪ–ಪೊಲೀಸ್ ಅಧೀಕ್ಷಕರ ಆದೇಶಗಳ ಮೇರೆಗೆ, ಅವರು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಸ್ಥಳಕ್ಕೆ ಹೋಗಿ, ದಾಳಿ ನಡೆಸಿದ್ದಾರೆ. ಅವರು, ಈ ಅಧಿನಿಯಮದ ಅಡಿಯಲ್ಲಿ ಸ್ವತಃ ವಿಶೇಷ ಪೊಲೀಸ್ ಅಧಿಕಾರಿಯಾಗಿ ವರ್ತಿಸಿರುವುದಿಲ್ಲವೆಂದು ತೀರ್ಮಾನಕ್ಕೆ ಬರಲು ಪರ್ಯಾಪ್ತವಾಗಿದೆ. ಮುಂದುವರೆದು, ಆರೋಪಪಟ್ಟಿಯಲ್ಲಿ ಪೊಲೀಸ್ ಸಬ್–ಇನ್ಸ್‌ಪೆಕ್ಟರ್‌ನನ್ನು, ತನಿಖಾಧಿಕಾರಿಯಾಗಿರುವಂತೆ ಏಕೆ ತೋರಿಸಲಾಗಿದೆ, ಎಂಬ ಪ್ರಶ್ನೆಗೆ ಉತ್ತರಿಸಲಾಗಿದ್ದು, ಉಪ ಪೊಲೀಸ್ ಅಧೀಕ್ಷಕರು ಅಥವಾ

ದಿನಾಂಕ: 5.6.2008ರ ಅಧಿಸೂಚನೆ ಮೇರೆಗೆ ವಿಶೇಷ ಅಧಿಕಾರಿಯಾಗಿ ತನಿಖೆ ಮಾಡುತ್ತಿರುವ ತನಿಖೆಯ ಮೇಲ್ವಿಚಾರಣೆ ಮಾಡುತ್ತಿರುವ ಉಪ ಪೊಲೀಸ್ ಅಧೀಕ್ಷಕರ ಬಗ್ಗೆ ಯಾಗಲಿ ಅಥವಾ ಪೊಲೀಸ್ ಇನ್ಸ್‌ಪೆಕ್ಟರ್‌ರ ಬಗ್ಗೆಯಾಗಲಿ, ಯಾವುದೇ ಆರೋಪಪಟ್ಟಿ ಪತ್ರಗಳಲ್ಲಿ ಉಲ್ಲೇಖಿಸಿರುವುದಿಲ್ಲ. ನಿರ್ದಿಷ್ಟ ರೀತಿಯಲ್ಲಿ ಒಂದು ಕೆಲಸವನ್ನು ಮಾಡಲು ಕಾನೂನಿನ ಮೇರೆಗೆ ಒಂದು ಪ್ರಕ್ರಿಯೆಯನ್ನು ಗೊತ್ತುಪಡಿಸಿರುವಾಗ, ಅದನ್ನು, ಆ ರೀತಿಯಲ್ಲಿ ಮಾತ್ರ ನಿರ್ವಹಿಸಬೇಕಾಗುತ್ತದೆ. ಆರೋಪಿಯನ್ನು ದಸ್ತಗಿರಿ ಮಾಡಿರುವ, ಪೊಲೀಸ್ ಸಬ್–ಇನ್ಸ್‌ಪೆಕ್ಟರ್‌ನು, ನ್ಯಾಯಾಲಯಕ್ಕೆ ಸೂಕ್ತ ನಮೂನೆಯನ್ನು ಸಲ್ಲಿಸಿದ್ದು, ವಿಶೇಷ ಪೊಲೀಸ್ ಅಧಿಕಾರಿಗೆ ನೆರವು ನೀಡಲು ರಾಜ್ಯ ಸರ್ಕಾರವು ಅಧಿಸೂಚಿಸಿದ "ಅಧೀನ ಪೊಲೀಸ್ ಅಧಿಕಾರಿ"ಯಾಗಿ ಅರ್ಹರಾಗಿರುವಂತೆ ದಾಖಲಿಸಿದ ಸಾಕ್ಷಿದಾರರ ಹೇಳಿಕೆಗಳಲ್ಲಿ ತೋರಿಸಿರುವುದಿಲ್ಲ. ಈ ಅಧಿನಿಯಮದ 13ನೇ ಪ್ರಕರಣದ (3)(ಎ) ಉಪ–ಪ್ರಕರಣದ ಸುಸಂಬದ್ಧ ಉಪಬಂಧವು, ಈ ಕೆಳಗಿನಂತಿದೆ:

> ***"13. ವಿಶೇಷ ಪೊಲೀಸ್ ಅಧಿಕಾರಿ ಮತ್ತು ಸಲಹಾ ಮಂಡಳಿ.–***
> *(1) .... (2) ....*
>
> *(3) ಈ ಅಧಿನಿಯಮದ ಮೇರೆಗೆ ಅಪರಾಧಗಳ ಸಂಬಂಧದಲ್ಲಿ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗೆ.–*
>
> *(ಎ) ಆ ಪ್ರದೇಶದ ವಿಶೇಷ ಪೊಲೀಸ್ ಅಧಿಕಾರಿಗೆ, ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಷ್ಟು ಸಂಖ್ಯೆಯ ಅಧೀನ ಪೊಲೀಸ್ ಅಧಿಕಾರಿಗಳು (ಕಾರ್ಯಸಾಧ್ಯವಿರುವಲ್ಲಿ ಮಹಿಳಾ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡು) ನೆರವು ನೀಡತಕ್ಕದ್ದು.*
>
> *(ಬಿ) ....."*

10. ಆ ವಿಷಯದ ದೃಷ್ಟಿಯಿಂದ, ವಿಷಯದ ಮೂಲಕ್ಕೆ ಹೋಗುವ ತನಿಖೆಯನ್ನು ಅಧಿಕಾರ ವ್ಯಾಪ್ತಿಯಿಲ್ಲದೇ ಮಾಡಲಾಗಿದೆ ಎಂದು ಅಭಿಪ್ರಾಯಪಡುವುದು ನ್ಯಾಯಸಮ್ಮತವಲ್ಲ. ಅದನ್ನು ಗಣನೆಗೆ ತೆಗೆದುಕೊಂಡ ನಂತರವೇ, ದೋಷಪೂರ್ಣ ತನಿಖೆಗೆ ಸಂಬಂಧಿಸಿದಂತೆ ಇತರೆ ವಾದಗಳನ್ನು ಪ್ರಸ್ತಾಪಿಸದೆ ಕ್ರಿಮಿನಲ್ ಪ್ರಾಸಿಕ್ಯೂಷನ್ ರದ್ದುಗೊಳ್ಳುವುದಕ್ಕೆ ಅರ್ಹವಾಗಿದೆ.

11. ಇದಲ್ಲದೇ, ಪೊಲೀಸ್ ಸಿಬ್ಬಂದಿ ಮತ್ತು ಪಂಚರೊಂದಿಗೆ ಪೊಲೀಸ್ ಇನ್ಸ್‌ಪೆಕ್ಟರ್, ಪೂರ್ವಯೋಜಿತ ದಾಳಿ ನಡೆಸಿದ ತರುವಾಯ ಪ್ರಕರಣವನ್ನು ನೋಂದಾಯಿಸಲಾಗಿದ್ದು, ***ಗಿರೀಶ್ ಚಂದ್ರ –ವಿರುದ್ಧ– (ಕರ್ನಾಟಕ) ರಾಜ್ಯ ಲೋಕಾಯುಕ್ತ ಪೊಲೀಸ್***[2] ಮೊಕದ್ದಮೆಯ ವಿಷಯದಲ್ಲಿ, ಈ ನ್ಯಾಯಾಲಯದ ತೀರ್ಪಿನ ದೃಷ್ಟಿಯಿಂದ ಅದನ್ನು ಅನುಮತಿಸಲಾಗದು.

12. ಸರ್ಕಾರಿ ಅಧಿಸೂಚನೆ ದಿನಾಂಕ: 02.08.2008ರಲ್ಲಿರುವ ದ್ವಂದ್ವದಿಂದಾಗಿ, ಇದು ಪ್ರಶ್ನಿಸುವ ಅರ್ಜಿಯಾಗಿರುವುದಿಲ್ಲ, ಆದರೆ ಈ ತನಿಖೆಯನ್ನು, ಅಧಿಕಾರವ್ಯಾಪ್ತಿ ಇಲ್ಲದೆ ಮಾಡಲಾಗಿದೆ ಎಂದು ಗಮನಿಸಿದ ತರುವಾಯವೂ ಕಾನೂನುಬಾಹಿರತೆಯನ್ನು ಮುಂದುವರಿಸಲು ಅವಕಾಶ ನೀಡಲು ಸಾಧ್ಯವಿಲ್ಲ. ಈ ಅಧಿನಿಯಮದ 13ನೇ ಪ್ರಕರಣದ ಅಡಿಯಲ್ಲಿ ಅಧಿಕಾರವ್ಯಾಪ್ತಿ ಇಲ್ಲದೆ ಅಪರಾಧಗಳ ನೋಂದಣಿ ಮತ್ತು ತನಿಖೆಯನ್ನು, ಮಾಡಲಾಗಿದೆ ಮತ್ತು ಇದು ನಿರರ್ಥಕ ಕಾರ್ಯವಾಗಿದ್ದು, ಸಾರ್ವಜನಿಕ ಸಮಯ ಮತ್ತು ಶಕ್ತಿಯ ದುರುಪಯೋಗವಾಗಿದೆ. ಕಾನೂನು ವಿಫಲವಾದಾಗ, ದುರುಳತನವು ವಿಜೃಂಭಿಸುತ್ತದೆ. ಅನಕ್ಷರತೆ ಮತ್ತು ಬಡತನವು, ಅಬಲೆಯರ ಮೇಲೆ ಶೋಷಣೆ ಎಸಗುವ ದುಷ್ಕೃತ್ಯದಲ್ಲಿ ತೊಡಗುವುದಕ್ಕೆ ಮತ್ತು ಸಂಘಟಿತವಾದ ರೀತಿಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಅವರನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ದಾರಿ ಮಾಡಿಕೊಡುತ್ತದೆ. ಈ ಅಧಿನಿಯಮದ

2. ಐಎಲ್ಆರ್ 2013 ಕೆಎಆರ್ 983

ಅಡಿಯಲ್ಲಿ ಹೂಡಿದ ಪ್ರಕರಣವು ಸರ್ಕಾರಿ ಆದೇಶದಲ್ಲಿರುವ ದ್ವಂದಾರ್ಥದಿಂದ ವಿಫಲವಾಗಿದ್ದರೆ, ಅದು ಪ್ರಜಾಪ್ರಭುತ್ವದ ಅಣಕವಲ್ಲದೆ ಬೇರೇನೂ ಅಲ್ಲ; ರಾಜ್ಯವು ಎಚ್ಚೆತ್ತುಕೊಂಡು, ಒಂದು ನಿರ್ದಿಷ್ಟ ಪ್ರದೇಶಕ್ಕೆ ಒಬ್ಬ ವಿಶೇಷ ಪೊಲೀಸ್ ಅಧಿಕಾರಿಯನ್ನು ನಿರ್ದಿಷ್ಟವಾಗಿ ನೇಮಕ ಮಾಡುವ ಮೂಲಕ, ಈ ಅಧಿನಿಯಮದ 13ನೇ ಪ್ರಕರಣದ ಆಜ್ಞಾಪನೆಯನ್ನು ಪರಿಣಾಮಕಾರಿಯನ್ನಾಗಿಸಲು, ಈ ಅಧಿನಿಯಮದ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತಮ್ಮ ಪದೀಯ ಪ್ರಕಾರ್ಯದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಅವರು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಲು, ಹಾಗೆ ನೇಮಕ ಮಾಡಲಾದ ವಿಶೇಷ ಅಧಿಕಾರಿಗಳನ್ನು ಸಂವೇದನಾಶೀಲರನ್ನಾಗಿಸಲು ಇದು ಸೂಕ್ತ ಸಮಯವಾಗಿದೆ.

13. ಈ ವೇಶ್ಯಾವೃತ್ತಿಯನ್ನು ಕಠಿಣ ಮತ್ತು ದೃಢ ಕಾನೂನುಗಳ ಮೂಲಕ ಪರಿಹರಿಸದೆ ಇರುವವರೆಗೆ, ಭಾರತ ಸಂವಿಧಾನದ ಅಡಿಯಲ್ಲಿ ಖಾತರಿಪಡಿಸಲಾದ, ಜೀವಿಸುವ ಹಕ್ಕು ಮತ್ತು ಸ್ವಾತಂತ್ರ್ಯವು, ಅನೈತಿಕ ಮಾನವ ಕಳ್ಳ ಸಾಗಾಣಿಕೆಗೆ ಒಳಗಾಗಿರುವ ಬಹಳಷ್ಟು ಬಲಿಪಶುಗಳ ನೋವುಗಳಿಗೆ ಸಂಗತವಾಗುವುದಿಲ್ಲ.

14. ಈ ಅಧಿನಿಯಮದ 13ನೇ ಪ್ರಕರಣದ ಮೂಲಕ ನೇಮಕ ಮಾಡಲಾದ ವಿಶೇಷ ಅಧಿಕಾರಿಯು, ತನಿಖೆಯನ್ನು ಸುಸೂತ್ರವಾಗಿ ನಡೆಸಿರುವುದಿಲ್ಲವಾದ್ದರಿಂದ, ಅಧಿವಿಚಾರಣೆಯನ್ನು ಈಗಾಗಲೇ ಪ್ರಾರಂಭಿಸಲಾಗಿದ್ದರೂ, ಇನ್ನೂ ಹೆಚ್ಚಿನ ಕಾಲ ಸ್ವತಃ ನ್ಯಾಯಾಲಯದ ವ್ಯವಹರಣೆಗಳನ್ನು ಮುಂದುವರೆಸಲು ಅನುಮತಿ ನೀಡುವುದು ಪ್ರಕ್ರಿಯೆಯ ದುರುಪಯೋಗವಾಗುತ್ತದೆ ಎಂಬ ಮೂಲ ಅನಿಶ್ಚಿತತೆಯನ್ನು ಗಮನಕ್ಕೆ ತೆಗೆದುಕೊಂಡರೆ ಅದು ಕಾನೂನು ಬಾಹಿರವಾದುದಾಗಿದೆ ಮತ್ತು ಕಾನೂನು ವ್ಯವಹರಣೆಯನ್ನು ನಿರರ್ಥಕಗೊಳಿಸುತ್ತದೆ. ಇದನ್ನು ಪರಿಗಣಿಸಿದ ನಂತರ ಈ ಅರ್ಜಿಯು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಧಿಕಾರವ್ಯಾಪ್ತಿ ಅಡಿಯಲ್ಲಿ ರದ್ದುಗೊಳ್ಳಲು ಅರ್ಹವಾಗಿದೆ.

ಈ ಅರ್ಜಿಯನ್ನು ಅಂಗೀಕರಿಸಲಾಗಿದೆ. VIIIನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರ ಕಡತದಲ್ಲಿ ಇತ್ಯರ್ಥದಲ್ಲಿರುವ ಎಸ್.ಸಿ.ಸಂಖ್ಯೆ.219/2013 ರಲ್ಲಿರುವ ಕ್ರಿಮಿನಲ್ ವ್ಯವಹರಣೆಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ.

ಕರ್ನಾಟಕ ಸರ್ಕಾರದ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಈ ಆದೇಶದ ಪ್ರತಿಯನ್ನು ನೀಡಲು ರಿಜಿಸ್ಟ್ರಿಗೆ ಸೂಚಿಸಲಾಗಿದೆ.